ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ನಾನು ಆಗಲೇ ಹೇಳಿದಂತೆ ಆರ್.ಎಸ್. ನಾಯ್ಡು ನಗರದಲ್ಲಿ ಹೊಸ ಬಸ್ ನಿಲ್ದಾಣ ಹಾಗೂ ಸಾಗತಹಳ್ಳಿಯಲ್ಲಿ ಹೊಸ ಬಸ್ ಘಟಕವನ್ನು ಆರಂಭಿಸುತ್ತಿದ್ದೇವೆ. ಮಾನ್ಯ ಸದಸ್ಯರು ಯಾವುದು ಆಗಬೇಕೆಂದು ಅಂದುಕೊಳ್ಳುತ್ತಾರೋ ಅವರಿಗಿಂತ ಮುಂಚೆಯೇ ನಾವು ಅದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇನ್ನೂ ಏನಾದರೂ ನಿಮ್ಮ ಚಿಂತನೆ ಇದ್ದರೆ ಅದಕ್ಕೂ ಕೂಡ ನಮ್ಮ ಸರ್ಕಾರ ಸ್ಪಂದಿಸುತ್ತದೆ. ಅಲ್ಲಿನ ಒತ್ತಡವನ್ನು ಸರ್ಕಾರವು ಗಮನದಲ್ಲಿಟ್ಟುಕೊಂಡು ಹೊಸ ಬಸ್ಸುಗಳನ್ನು ಹಾಕುವುದಕ್ಕೆ ಕೂಡ ಕ್ರಮ ಕೈಗೊಳ್ಳುತ್ತದೆ. ಮಾನ್ಯ ಸದಸ್ಯರು ಕೇಳಿದಂತೆ 50 ಬಸ್ಸುಗಳನ್ನು ಹೊಸದಾಗಿ ಅಲ್ಲಿಗೆ ಹಾಕುವುದಕ್ಕಾಗುವುದಿಲ್ಲ. ಒತ್ತಡ ಎಷ್ಟಿದೆ, ಅವಶ್ಯಕತೆ ಎಷ್ಟಿದೆ, ಅದನ್ನು ಸರ್ವೆ ಮಾಡಿ ನಾವು ಹೊಸದಾಗಿ ಬಸ್ಸುಗಳನ್ನು ಹಾಕುತ್ತೇವೆ. ಅಲ್ಲಿ ಒತ್ತಡವನ್ನು ಗಮನಿಸಿಯೇ ಇನ್ನೂ ಹೆಚ್ಚು ಅನುಸೂಚಿಗಳನ್ನು ಮಾಡುವ ಸಲುವಾಗಿ ಮೂರನೇ ಘಟಕವನ್ನು ಅಲ್ಲಿ ಪ್ರಾರಂಭಿಸುತ್ತಿದ್ದೇವೆ. ದಯವಿಟ್ಟು ನೀವು ನಮಗೆ ಸ್ವಲ್ಪ ಸಮಯ ಕೊಡಿ. ಎಷ್ಟು ಗಂಟೆಗಳಲ್ಲಿ ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. 1998-99ನೇ ಸಾಲಿನಲ್ಲಿ ಮೈಸೂರು ನಗರದ ಒತ್ತಡವನ್ನು ಗಮನಿಸಿ, ಆ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು, ನಿಮಗೆ ಸಮಾಧಾನ ಆಗುವ ರೀತಿಯಲ್ಲಿ ಸರ್ಕಾರ ಕೈಗೊಳ್ಳುತ್ತದೆ ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಡಿ.ವಿ.ಜಿ.ಯವರು ಒಂದು ಪದ್ಯದಲ್ಲಿ ಈ ರೀತಿ ಹೇಳಿದ್ದಾರೆ,

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೇ
ಬೆಲ್ಲಸಕ್ಕರೆಯಾಗು ದೀನ ದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಅದರಂತೆ ಆದಷ್ಟು ಬೇಗನೆ ಈ ದಿಸೆಯಲ್ಲಿ ನಿಮ್ಮ ಸರ್ಕಾರ ಕ್ರಮ ಕೈಗೊಂಡರೆ ಒಳ್ಳೆಯದು.

ಒಣಭೂಮಿ ಬೇಸಾಯ ಅಭಿವೃದ್ಧಿ ಯೋಜನೆಯ ಪ್ರಗತಿ

176 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಫ್.ಡಬ್ಲ್ಯೂ ಜರ್ಮನ್ ಯೋಜನೆಯಿಂದ ರಾಜ್ಯದಲ್ಲಿ ತೆಗೆದುಕೊಂಡಿರುವ ಒಣ ಭೂಮಿ ಬೇಸಾಯ ಅಭಿವೃದ್ಧಿ ಯೋಜನೆಗಳಾವುವು? (ಯಾವ ವರ್ಷ, ಯಾವ ಜಿಲ್ಲೆ, ಪ್ರದೇಶದ ವಿಸ್ತೀರ್ಣ ಹಾಗೂ ಒದಗಿಸಿರುವ ಹಣದ ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಯಡಿಯಲ್ಲಿ ಮತ್ತೆ ತೆಗೆದುಕೊಳ್ಳುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಕೆ.ಎಫ್.ಡಬ್ಲ್ಯೂ (ಜರ್ಮನ್) ನೆರವಿನ 5 ಜಲಾನಯನ ಅಭಿವೃದ್ಧಿ ಯೋಜನೆಯನ್ನು ಒಟ್ಟು 5507-50 ಲಕ್ಷ ರೂಗಳ ವೆಚ್ಚದಲ್ಲಿ 1995-96 ರಿಂದ ಪ್ರಾರಂಭಗೊಂಡಂತೆ 2001-2002 ರವರೆಗಿನ 7 ವರ್ಷಗಳ ಅವಧಿವರೆಗೆ ತೆಗೆದುಕೊಳ್ಳಲಾಗಿದೆ. ಈ ಯೋಜನೆಯ ವಿಸ್ತೀರ್ಣ, ಇದರ ಸ್ಥಳ ಇತರೆ ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಜಲಾನಯನ ಹೆಸರು	ತಾಲ್ಲೂಕು	ಜಿಲ್ಲೆ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಯೋಜನೆಯ ಹಣ (ಲಕ್ಷಗಳಲ್ಲಿ)
1)	ಕೋಲಾರಮ್ಮ	ಕೋಲಾರ	ಕೋಲಾರ	8927	294.900
2)	ಮೇಲ್ಯ	ಗೌರಿಬಿದನೂರು	"	9628	746.300
3)	ಹೊಸೂರು ಹಳ್ಳ	"	"	7768	311.400
4)	ಮೋತಿ ತಲಾಬ್	ಪಾಂಡವಪುರ	ಮಂಡ್ಯ	9170	727.500
5)	ಅರಸೀಕೆರೆ	ಅರಸೀಕೆರೆ	ಹಾಸನ	18140	1085.200
	ಇತರೆ ನಿರ್ದೇಶನಾಲಯ ಮೌಲ್ಯಮಾಪನ ಬೆಲೆ ಏರಿಕೆ ಬಾಬ್ತು	-	-	-	2342.200
	ಒಟ್ಟು			**53633**	**5507.500**

ಆ) ಈ ಯೋಜನೆಯ ಕಾಮಗಾರಿಗಳು ವಿವಿಧ ಹಂತದಲ್ಲಿ ಮುಂದುವರಿದಿದ್ದು ಕಾರ್ಯಕ್ರಮಗಳು 2001-2002ನೇ ಸಾಲಿನವರೆಗೂ ಮುಂದುವರಿಯುವುದು.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೇ, ವಾರ್ಷಿಕವಾಗಿ ಈ ಜಲಾನಯನ ಅಭಿವೃದ್ಧಿ ಪ್ರದೇಶದ ಕಾಮಗಾರಿಗಳನ್ನು ಪ್ರಾರಂಭಿಸಿರುವುದು ಎಷ್ಟನೆಯ ವರ್ಷದಿಂದ? ಇಲ್ಲಿಯವರೆಗೆ ಆ ಕಾಮಗಾರಿಗಳಿಗೆ ಒದಗಿಸಿರತಕ್ಕಂಥ ಹಣ ಎಷ್ಟು? 1998-99ನೇ ಸಾಲಿಗೆ ಇದಕ್ಕಾಗಿ ಒದಗಿಸಿರತಕ್ಕ ಹಣ ಎಷ್ಟು?

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಈ ಯೋಜನೆ 1996-97ನೇ ಸಾಲಿಗೆ ಪ್ರಾರಂಭವಾಗಿದೆ. ಈ ಬಗ್ಗೆ ಸಂಬಂಧಿಸಿದ ವಿವರವಾದ ಮಾಹಿತಿ ನನ್ನ ಹತ್ತಿರ ಇದೆ. ತಾವು ಓದುವುದಕ್ಕೆ ಅವಕಾಶ ಕೊಟ್ಟರೆ ನಾನು ಅದನ್ನು ಇಲ್ಲಿ ಓದಿ ಬಿಡುತ್ತೇನೆ, ಇದು ಬಹಳ ಇರುವುದರಿಂದ ಹೆಚ್ಚು ಸಮಯ ಹಿಡಿಯುತ್ತದೆ. ಇಲ್ಲದಿದ್ದರೆ ಈ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನೇರವಾಗಿ ಕಳುಹಿಸುವುದಕ್ಕೂ ಕೂಡ ನಾನು ತಯಾರಿದ್ದೇನೆ. ತಾವು ಅನುಮತಿ ಕೊಟ್ಟರೆ ಓದಿ ಬಿಡುತ್ತೇನೆ.

ಉಪಾಧ್ಯಕ್ಷರು : ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಿ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೇ, ಮಾಹಿತಿ ನನ್ನ ಹತ್ತಿರವೇ ಲಭ್ಯವಿದೆ. ಮಾಹಿತಿಗಾಗಿ ನಾವು ಸದನದಲ್ಲಿ ಪ್ರಶ್ನೆ ಕೇಳುವುದಿಲ್ಲ. ಈ ಪ್ರಶ್ನೆಗೆ ನಾವೇನು ಉಪ ಪ್ರಶ್ನೆ ಕೇಳುತ್ತೇವೆಯೋ, ಅದಕ್ಕೆ ನಮಗೆ ಉತ್ತರ ಬೇಕಾಗುತ್ತದೆ. ಮಾನ್ಯ ಸಚಿವರು ಮಾಹಿತಿಯನ್ನು ಸದನದಲ್ಲಿ ಓದಿಬಿಡಲಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿ ಮೇರೆಗೆ ನಾನು ಆ ಮಾಹಿತಿ ಇಲ್ಲಿ ಓದಿ ಬಿಡುತ್ತೇನೆ. ನಮ್ಮ ರಾಜ್ಯದಲ್ಲಿ ಜರ್ಮನ್ ನೆರವಿನೊಂದಿಗೆ ಮೂರು ಜಿಲ್ಲೆಗಳಲ್ಲಿ ಈ ಜಲಾನಯನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಮೂರು ಜಲಾನಯನ ಪ್ರದೇಶಗಳಿವೆ. 1996-97ನೇ ಸಾಲಿನಲ್ಲಿ ಕೋಲಾರಮ್ಮ ವಾಟರ್ ಶೆಡ್‌ಗೆ 71.245 ಲಕ್ಷ ರೂ. ಹಣ ನಿಗದಿ ಮಾಡಲಾಗಿತ್ತು. ಅದರಲ್ಲಿ 52.37 ಲಕ್ಷ ರೂ. ಖರ್ಚಾಗಿದೆ. 1997-98ರಲ್ಲಿ ಇದಕ್ಕೆ 84.565 ಲಕ್ಷ ರೂ. ನಿಗದಿ ಮಾಡಲಾಗಿತ್ತು. ಅದರಲ್ಲಿ 84.565 ಲಕ್ಷ ರೂ.ಗಳು ಖರ್ಚಾಗಿದೆ. ಮೇಲ್ಯ ಜಲಾನಯನ ಪ್ರದೇಶದಲ್ಲಿ 1996-97ರಲ್ಲಿ ನಿಗದಿ ಪಡಿಸಲಾಗಿದ್ದ 73.683 ಲಕ್ಷ ರೂ.ಗಳ ಪೈಕಿ 58.778 ಲಕ್ಷ ರೂ. ಖರ್ಚು ಮಾಡಲಾಗಿದೆ. 1997-98ನೇ ಸಾಲಿನಲ್ಲಿ ಇಲ್ಲಿಗೆ ನಿಗದಿ ಪಡಿಸಲಾಗಿದ್ದ 85.845 ಲಕ್ಷ ರೂ.ಗಳಲ್ಲಿ ಪೂರ್ತಿ ಅಷ್ಟೂ ಹಣ ಕೂಡ ಅಲ್ಲಿ ಖರ್ಚಾಗಿದೆ. ಹೊಸೂರ ಹಳ್ಳ ಜಲಾನಯನ ಪ್ರದೇಶಕ್ಕೆ 1996-97ನೇ ಸಾಲಿನಲ್ಲಿ ನಿಗದಿ ಪಡಿಸಲಾಗಿದ್ದ 105.031 ಲಕ್ಷ ರೂ.ಗಳಲ್ಲಿ 83.499 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1997-98ನೇ ಸಾಲಿನಲ್ಲಿ ಇದಕ್ಕೆ ನಿಗದಿ ಪಡಿಸಲಾಗಿದ್ದ 93.37 ಲಕ್ಷ ರೂ.ಗಳಲ್ಲಿ ಅಷ್ಟೂ ಹಣ ಪೂರ್ತಿ ಖರ್ಚು ಮಾಡಲಾಗಿದೆ. ಹಾಸನ ಜಿಲ್ಲೆಯ ಅರಸೀಕೆರೆ ಜಲಾನಯನ ಪ್ರದೇಶಕ್ಕೆ 1996-97ರಲ್ಲಿ ನಿಗದಿ ಪಡಿಸಲಾಗಿದ್ದ 86.764 ಲಕ್ಷ ರೂ.ಗಳಲ್ಲಿ 42.872 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1997-98ನೇ ಸಾಲಿನಲ್ಲಿ 83.932 ಲಕ್ಷ ರೂ. ನಿಗದಿಪಡಿಸಿದ್ದರಲ್ಲಿ ಒಂದು ಸಾವಿರ ಕಡಿಮೆ ಅಷ್ಟೂ ಹಣ ಪೂರ್ತಿ ಖರ್ಚಾಗಿದೆ. ಮಂಡ್ಯ ಜಿಲ್ಲೆಯ ಮೋತಿ ತಲಾಬ್ ಜಲಾನಯನ ಪ್ರದೇಶಕ್ಕೆ 1996-97ರಲ್ಲಿ ನಿಗದಿಪಡಿಸಲಾಗಿದ್ದ 63.277 ಲಕ್ಷ ರೂ.ಗಳಲ್ಲಿ 45.055 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1997-98ನೇ ಸಾಲಿನಲ್ಲಿ ಇದಕ್ಕೆ ನಿಗದಿಪಡಿಸಲಾಗಿದ್ದ 52.288 ಲಕ್ಷ ರೂ.ಗಳಲ್ಲಿ 51.542 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1996-97ನೇ ಸಾಲಿನಲ್ಲಿ ಹಣ ಸ್ವಲ್ಪಮಟ್ಟಿಗೆ ಕಡಿಮೆ ಖರ್ಚಾಗಿದೆ. ಈ ಯೋಜನೆಯಲ್ಲಿ ಜರ್ಮನ್ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸೇರಿರುವುದರಿಂದ ಹಾಗೂ ಈ ಕಾರ್ಯಕ್ರಮ ಸ್ವಲ್ಪ ತಡವಾಗಿ ಪ್ರಾರಂಭವಾಗಿರುವುದರಿಂದ 1996-97ನೇ ಸಾಲಿನಲ್ಲಿ ಹಣ ಸ್ವಲ್ಪಮಟ್ಟಿಗೆ ಖರ್ಚಾಗಿಲ್ಲ. ಆದರೂ ಸಹಾ ಮುಂದೆ ಬರತಕ್ಕ ವರ್ಷಗಳಲ್ಲಿ ಇದಕ್ಕೆ ನಿಗದಿಪಡಿಸಲಾಗಿರುವ ಎಲ್ಲಾ ಹಣವನ್ನೂ ಕೂಡ ನಾವು ಖರ್ಚು ಮಾಡುತ್ತೇವೆ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ತಮ್ಮ ಉತ್ತರದಲ್ಲಿ 2001-2002ನೇ ಇಸ್ವಿಯೊಳಗಾಗಿ ಇದನ್ನು ಮುಗಿಸುತ್ತೇವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಇನ್ನು ಕೇವಲ ನಾಲ್ಕು ವರ್ಷ ಮಾತ್ರ ಉಳಿದಿದೆ. ಆದರೆ ಇಲ್ಲಿಯವರೆಗೆ ತಾವು ಖರ್ಚು ಮಾಡಿರತಕ್ಕಂತಹ ಹಣ ಬಹಳ ಕಡಿಮೆ. 55 ಕೋಟಿ ರೂ.ಗಳ ಅಂದಾಜಿನ ಈ ಯೋಜನೆಯಲ್ಲಿ ತಾವು ಇದುವರೆಗೆ 8.8 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ನಾಲ್ಕು ವರ್ಷಗಳಲ್ಲಿ

ಈ ಯೋಜನೆ ಮುಗಿಸಬೇಕಾದರೆ ಉಳಿದಂತಹ ಪೂರ್ತಿ ಹಣವನ್ನು ಬಿಡುಗಡೆ ಮಾಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಪ್ರತಿ ವರ್ಷ ತಾವು ಎಷ್ಟೆಷ್ಟು ಹಣವನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಬಿಡುಗಡೆ ಮಾಡಬೇಕೆಂಬ ಗುರಿ ಇಟ್ಟುಕೊಂಡಿರುತ್ತೀರಿ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ ಸಚಿವರು ಆಗಲೇ ಉತ್ತರಿಸುತ್ತಾ ಅರಸೀಕೆರೆ ಜಲಾನಯನ ಪ್ರದೇಶಕ್ಕೆ 1996-97 ಮತ್ತು 1997-98ನೇ ಸಾಲಿಗೆ ಬಿಡುಗಡೆ ಮಾಡಿರತಕ್ಕ ಹಣದ ವಿವರ ನೀಡಿದರು. ಈಗ ಜಲಾನಯನ ಅಭಿವೃದ್ಧಿ ಕೈಗೊಂಡಿರುವ ಐದು ಪ್ರದೇಶಗಳಲ್ಲೆಲ್ಲಾ ಅರಸೀಕೆರೆಯೇ ದೊಡ್ಡ ಪ್ರದೇಶವಾಗಿದೆ. ಮಾನ್ಯ ಸಚಿವರು ನೀಡಿದ ಅಂಕಿಅಂಶಗಳ ಪ್ರಕಾರ ನಾಲ್ಕೂ ಜಲಾನಯನ ಪ್ರದೇಶ ಯೋಜನೆಯ ಮೂರನೇ ಒಂದು ಭಾಗದಷ್ಟು ಅರಸೀಕೆರೆ ತಾಲ್ಲೂಕಿಗೇ ಇದೆ. ಆದರೆ ಇಲ್ಲಿಯವರೆಗೆ ತಾವು ಅರಸೀಕೆರೆಗೆ ಕೇವಲ ಒಂದು ಕೋಟಿ 60 ಲಕ್ಷ ರೂ.ಗಳನ್ನು ಮಾತ್ರ ಒದಗಿಸಿದ್ದೀರಿ. ಇದರಲ್ಲಿ ಸ್ವಲ್ಪ ವ್ಯತ್ಯಾಸ ಇದೆ ಎಂಬುದು ತಮಗೆ ಅರ್ಥವಾಗುತ್ತದೆ. ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಿಗೆ ಒದಗಿಸಿರತಕ್ಕ ಹಣದ ಅರ್ಧ ಭಾಗ ಕಡೂ ಅರಸೀಕೆರೆಗೆ ಒದಗಿಸಿಲ್ಲದಿರುವುದು ಕಂಡು ಬರುತ್ತದೆ. ಒದಗಿಸಿರತಕ್ಕ ಹಣವೂ ಕೂಡ ಖರ್ಚು ಮಾಡಿಲ್ಲ. 1996-97ನೇ ಸಾಲಿಗೆ ಅರಸೀಕೆರೆಗೆ ಬಿಡುಗಡೆಯಾದ 86 ಲಕ್ಷ ರೂ.ಗಳಲ್ಲಿ 42 ಲಕ್ಷ ರೂ.ಗಳು ಮಾತ್ರ ಖರ್ಚಾಗಿದೆ. ಕೊನೆ ಹಂತದಲ್ಲಿ ಹಣ ಕೂಡ ಬಿಡಗಡೆ ಮಾಡಿಲ್ಲ. ಇನ್ನು ಉಳಿದಿರತಕ್ಕಂತಹ ಇಷ್ಟು ಹಣವನ್ನು ತಾವು ಇನ್ನು ನಾಲ್ಕು ವರ್ಷಗಳ ಗುರಿಯಲ್ಲಿ ಖರ್ಚು ಮಾಡುತ್ತೀರಾ?

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಪೂರ್ತಿ ಇಡೀ ರಾಜ್ಯದ್ಲಲಿರತಕ್ಕಂತಹ ಯೋಜನೆಗಳಿಗೆಂದು ಇಷ್ಟು ಹಣ ನಿಗದಿಯಾಗಿದೆ. ಅಷ್ಟು ಹಣವನ್ನು ನಾವು ಖರ್ಚು ಮಾಡಲೇಬೇಕು. ಅಷ್ಟಲ್ಲದೆ, ಪ್ರತಿ ಜಲಾನಯನ ಪ್ರದೇಶಕ್ಕೆ ಇಷ್ಟು ಹಣ ಎಂದೂ ಕೂಡ ನಿಗದಿಯಾಗಿದೆ. ಅಷ್ಟನ್ನೂ ಕೂಡ ಖರ್ಚು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರು ಏನೂ ಅನುಮಾನ ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ನಾನು ಆಗಲೇ ಹೇಳಿದಂತೆ 1996-97ನೇ ಸಾಲಿನಲ್ಲಿ ಈ ಕಾರ್ಯಕ್ರಮ ಸ್ವಲ್ಪ ತಡವಾಗಿ ಆರಂಭವಾಗಿರುವುದರಿಂದ ಕಡಿಮೆ ಖರ್ಚು ಆಗಿದೆ. ತಾವು ನಾನು ನೀಡಿದ ಅಂಕಿ ಅಂಶದ ಪ್ರಕಾರ ನೋಡಿದರೆ ಎಲ್ಲಾ ಜಲಾನಯನ ಪ್ರದೇಶಗಳಲ್ಲೂ ಕೂಡ ಪೂರ್ತಿ ಹಣವನ್ನು ಖರ್ಚು ಮಾಡಿಲ್ಲ ಎಂಬುದನ್ನು ನೋಡಬಹುದು. ಉಳಿಕೆ ಇರತಕ್ಕ ಹಣವನ್ನು ನಿಗದಿತ ಅವಧಿಯೊಳಗಾಗಿ ಖರ್ಚು ಮಾಡಲು ಎಲ್ಲಾ ರೀತಿಯ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನತಕ್ಕಂತಹ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೇ, ಹಿಂದೆ ಎರಡು ವರ್ಷ ಹಣ ಒದಗಿಸಿರುವುದರಲ್ಲಿ ಬಹಳ ಕೊರತೆಯಾಗಿದೆ. ನಾನು ಮೂಲಭೂತವಾಗಿ ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆ ಎಂದರೆ, ಜಲಾನಯನ ಪ್ರದೇಶಗಳನ್ನು ಯೋಜನೆ ಅನುಷ್ಠಾನಗೊಳಿಸಲು ಹಂತ ಹಂತವಾಗಿ ಮೈಕ್ರೋ ವಾಟರ್ ಶೆಡ್ ಎಂದು ಮಾಡಿಕೊಳ್ಳಬೇಕೆಂದು ಮಾಡಿದಿರಿ. ನಿಮ್ಮ ವಾಟರ್ ಶೆಡ್ ಕಾನ್‌ಸೆಪ್ಟ್ ಇಂಪ್ಲಿಮೆಂಟ್ ಆಗಬೇಕಾದರೆ ಮೈಕ್ರೋ ವಾಟರ್ ಶೆಡ್ ವರ್ಕ್ಸ್ ಕಂಪ್ಲೀಟ್ ಆಗುವುದು ಬಹಳ ಮುಖ್ಯ. ಇಟ್ ಶುಡ್ ರೀಚ್ ದಿ ಸ್ಯಾಚುರೇಷನ್ ಅಂತೇನು ತಾವು ಟೆಕ್ನಿಕಲ್ಲಾಗಿ ಹೇಳುತ್ತೀರಿ, ಅದನ್ನು ಮಾಡಿಸತಕ್ಕಂಥದ್ದಕ್ಕೆ

ಉಳಿದಿರತಕ್ಕ ಹಣವನ್ನು ಕೂಡಲೇ ಬಿಡುಗಡೆ ಮಾಡಿ ಕೆಲಸವನ್ನು ಪೂರ್ಣಗೊಳಿಸುತ್ತೀರೋ?

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ನಿಗದಿ ಪಡಿಸಿದ ಅವಧಿಯೊಳಗೆ ಪೂರ್ತಿ ಹಣವನ್ನು ನಾವು ಖರ್ಚು ಮಾಡುತ್ತೇವೆ. ಎಷ್ಟು ವಿಸ್ತೀರ್ಣತೆಯ ಪ್ರದೇಶ ಇದರ ಪ್ರಯೋಜನ ಪಡೆಯಬೇಕಾಗಿತ್ತೋ ಅಷ್ಟು ವಿಸ್ತೀರ್ಣಕ್ಕೂ ಪ್ರಯೋಜನವನ್ನು ಪಡೆಯತಕ್ಕಂಥದ್ದಕ್ಕೆ ನಾವು ಪ್ರಯತ್ನ ಪಡುತ್ತೇನೆ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೇ, ಹೋದ ಸಾರಿ ಈ ಪ್ರಶ್ನೆ ಇಲ್ಲಿ ಪ್ರಸ್ತಾಪವಾಗಿತ್ತು. ಆಗ ಮಾನ್ಯ ಕೃಷಿ ಸಚಿವರು ತಾವು ನಿರ್ದೇಶಕರನ್ನು ಕರೆಯಿಸಿ ಮಾತನಾಡಿ ಹಣ ಬಿಡುಗಡೆ ಮಾಡಿ ಕೆಲಸ ಮಾಡಿಸುತ್ತೇನೆ ಎಂದು ಹೇಳಿದ್ದರು. ಆ ಕೆಲಸ ಆಗಲಿಲ್ಲ ಅನ್ನುವುದಕ್ಕೋಸ್ಕರವಾಗಿ ಮತ್ತೊಮ್ಮೆ ನಾನು ಇಲ್ಲಿ ಈ ಪ್ರಶ್ನೆಯನ್ನು ಕೇಳಬೇಕಾಯಿತೇ ಹೊರತು ಬೇರೆ ಇನ್ನಾವ ಉದ್ದೇಶದಿಂದಲೂ ಅಲ್ಲ. ದಯವಿಟ್ಟು ಸಚಿವರು ಅದರ ಬಗ್ಗೆ ಗಮನಹರಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಅವರ ಪ್ರಶ್ನೆಯನ್ನು ನಾನು ಗಮನಿಸುತ್ತೇನೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೇ, ಜಲಾನಯನ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮವನ್ನು ಪಾಂಡವಪುರದ ಮೋತಿ ತಲಾಬ್‌ನಲ್ಲಿ ತಾವು ಕೈಗೊಂಡಿದ್ದೀರಿ. ಅಲ್ಲಿ ಯಾವ ಯಾವ ಕೆಲಸ ಕಾರ್ಯಗಳಾಗುತ್ತಿವೆ, ಏನೇನು ಆಗಬೇಕಾಗಿದೆ ಎಂದು ರಿವ್ಯೂ ಮಾಡಲು ಕನಿಷ್ಠ ಪಕ್ಷ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದರೆ, ಅಲ್ಲಿನ ಪ್ರೋಗ್ರೆಸ್ ಬಗ್ಗೆ ನಾವು ಸರ್ಕಾರಕ್ಕೆ ರಿಪೋರ್ಟ್ ಆದರೂ ಮಾಡಬಹುದು. ಅದರ ಉಪಯೋಗ ಯಾವ ಮಟ್ಟದಲ್ಲಿ ಆಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡುವ ಸಲುವಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಮೂರು ತಿಂಗಳಿಗೊಮ್ಮೆ ಮೀಟಿಂಗ್ ಮಾಡಿದರೆ ಒಳ್ಳೆಯದು. ಆ ರೀತಿ ಮಾಡಿದರೆ ಈ ಕಾರ್ಯಕ್ರಮ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳ್ಳಲು ಸಹಾಯವಾಗುತ್ತದೆ ಎಂಬುದು ನನ್ನ ಸಲಹೆಯಾಗಿದೆ. ನನ್ನ ಸಲಹೆಯನ್ನು ಸರ್ಕಾರದವರು ದಯವಿಟ್ಟು ಪರಿಶೀಲನೆ ಮಾಡಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮೂರು ತಿಂಗಳಿಗೊಮ್ಮೆ ಕೆ.ಡಿ.ಪಿ. ಕಾರ್ಯಕ್ರಮದ ಬಗ್ಗೆ ರಿವ್ಯೂ ಮಾಡುವುದಕ್ಕೆ ಅವಕಾಶವಿದೆ. ಆ ಸಭೆಯಲ್ಲಿ ಇದನ್ನೂ ಕೂಡ ಪ್ರಗತಿ ಪರಿಶೀಲನೆ ಮಾಡುವುದಕ್ಕೆ ಅವಕಾಶವಿರುವುದರಿಂದ ದಯವಿಟ್ಟು ಮಾನ್ಯ ಸದಸ್ಯರು ಅಲ್ಲಿ ಪ್ರಗತಿ ಪರಿಶೀಲನೆ ಮಾಡಬೇಕು. ಇದರ ಜೊತೆಗೆ ಎಲ್ಲೆಲ್ಲಿ ಜಲಾನಯನ ಕಾರ್ಯಕ್ರಮಗಳು ಕಾರ್ಯ ಗತವಾಗುತ್ತಿವೆಯೋ ಅಲ್ಲಿ ಅದರ ಬಗ್ಗೆ ಪ್ರತಿಯೊಂದು ಮಾಹಿತಿಯನ್ನು ಆ ಕ್ಷೇತ್ರದ ಶಾಸಕರಿಗೆ ಒದಗಿಸುವುದಕ್ಕೆ ನಾನು ಏರ್ಪಾಟು ಮಾಡುತ್ತೇನೆ. ನಾನು ಮಾನ್ಯ ಶಾಸಕರಲ್ಲಿ ವಿನಂತಿ ಮಾಡುವುದೇನೆಂದರೆ ತಾವು ದಯವಿಟ್ಟು ಇದರ ಬಗ್ಗೆ ಶ್ರದ್ಧವಹಿಸಿ ಆ ಕಾರ್ಯಕ್ರಮಗಳು ಹೇಗೆ ಆಗುತ್ತಿವೆ ಎಂಬುದನ್ನು ಗಮನಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಇವೊತ್ತು ಸಂಜೆಯೊಳಗೆ ಎಲ್ಲಾ ಮಾಹಿತಿಯನ್ನು ನಿಮಗೆ ಮತ್ತು ಎಲ್ಲಾ ಶಾಸಕರುಗಳಿಗೆ ಒದಗಿಸಲು ಏರ್ಪಾಟು ಮಾಡುತ್ತೇನೆ.